ಅ) ನಿರುದ್ಯೋಗಿ ಮತ್ತು ಸಾಕಷ್ಟು ಉದ್ಯೋಗಗಳಿಲ್ಲದ ಗ್ರಾಮೀಣ ಪ್ರದೇಶದಲ್ಲಿರುವ ಪುರುಷ ಹಾಗೂ ಮಹಿಳೆಯರಿಗೆ ಹೆಚ್ಚುವರಿ ಲಾಭಗಳಿಸಿ ಕೊಡುವಂತಹ ಉದ್ಯೋಗ ಸೃಜಿಸುವುದು ಜವಾಹರ್ ರೋಜ್‌ಗಾರ್ ಯೋಜನೆಯ ಮೂಲ ಉದ್ದೇಶವಾದ್ದರಿಂದ ನಗರ ಪ್ರದೇಶದವರಿಗೆ ಈ ಯೋಜನೆಯಡಿ ಸಾಲ ಸೌಲಭ್ಯ ಒದಗಿಸುವುದು ಈ ಯೋಜನೆ ವ್ಯಾಪ್ತಿಗೆ ಬರುವುದಿಲ್ಲ.

ಆ) ಆನ್ವಯಿಸುವುದಿಲ್ಲ.

ಶ್ರೀ ಬಸನಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ನಗರ ಪ್ರದೇಶಗಳಲ್ಲಿ ಸಾಲ ಸೌಲಭ್ಯಗಳನ್ನು ಒದಗಿಸುವುದು, ಈ ಯೋಜನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ತಿಳಿಸಿದ್ದೀರಿ. ಆದರೆ ನಗರದ ವ್ಯಾಪ್ತಿಯಲ್ಲಿ ಬರುವಂತಹ ನಿರುದ್ಯೋಗಿ ಯುವಕರಿಗೆ ಯಾವ ಒಂದು ಯೋಜನೆಯಡಿಯಲ್ಲಿ ಅವರಿಗೆ ಸಾಲ ಸೌಲಭ್ಯ ಒದಗಿಸುವಂತಹ ವ್ಯವಸ್ಥೆ ಇದೆ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಇದೊಂದು ಕೇಂದ್ರ ಸರ್ಕಾರದ ಯೋಜನೆ. ಜವಾಹರ್ ರೋಜ್‌ಗಾರ್ ಯೋಜನೆ ಕೇಂದ್ರ ಸರ್ಕಾರದ ಯೋಜನೆಯಾಗಿರುವುದರಿಂದ, ಆ ಯೋಜನೆಯ ಕೆಲವು ನೀತಿ ಮತ್ತು ನಿಯಮಗಳನ್ನು ಅನುಸರಿಸಿ, ಅದನ್ನು ನಾವು ಅನುಷ್ಠಾನಗೊಳಿಸಬೇಕಾಗುತ್ತದೆ. ಆ ಯೋಜನೆಯಲ್ಲಿ ರಾಜ್ಯ ಸರ್ಕಾರದ ಪಾಲೂ ಇದೆ.

ನಗರ ಪ್ರದೇಶಗಳ ನಿರುದ್ಯೋಗಿಗಳಿಗೂ ಕೂಡ ಉದ್ಯೋಗ ಒದಗಿಸಿಕೊಡುವುದರಲ್ಲಿ, ಇದು ಬಹಳ ಪ್ರಮುಖವಾದ ಚರ್ಚೆ ಇದಾಗುವುದರಿಂದ, ಇದರ ಬಗ್ಗೆಯೂ ಕೂಡ ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ಬರೆಯುತ್ತದೆ. ತಾವೂ ಕೂಡ ತಮ್ಮ ಪ್ರಭಾವವನ್ನು ಕೇಂದ್ರ ಸರ್ಕಾರದ ಮೇಲೆ ಬೀರಿ, ಈ ಯೋಜನೆಯಲ್ಲಿ ನಗರಪ್ರದೇಶದ ನಿರುದ್ಯೋಗಿಗಳನ್ನು ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಮೀನು ಅಭಿವೃದ್ಧಿ ಮಂಡಳಿ

2254 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಮೀನು ಅಭಿವೃದ್ಧಿ ಮಂಡಳಿ (ಕೆ.ಎಫ್.ಡಿ.ಸಿ) ಶಾಖೆಗಳನ್ನು ಎಲ್ಲೆಲ್ಲಿ ಹೊಂದಿದೆ?

ಆ) ಒಟ್ಟು ಇರುವ ಸಿಬ್ಬಂದಿಗಳೆಷ್ಟು?

ಇ) ಕೆ.ಎಫ್.ಡಿ.ಸಿ.ಯನ್ನು ಲಾಭದಾಯಕವನ್ನಾಗಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ, ಮಂಗಳೂರು ಇದು ಉತ್ಪಾದನಾ ಘಟಕಗಳನ್ನು ಮಂಗಳೂರು, ಉಳ್ಳಾಲ, ಕುಳ್ಳಿ, ಕಾಪು, ಮಲ್ಪೆ, ಗಂಗೊಳ್ಳಿ, ಭಟ್ಕಳ, ತದಡಿ ಮತ್ತು ಕಾರವಾರಗಳಲ್ಲಿ ಹೊಂದಿದೆ. ಜೊತೆಗೆ 20 ಮಾರಾಟ ಮಳಿಗೆಗಳನ್ನು ಬೆಂಗಳೂರು (8 ಸಂಖ್ಯೆ), ಹುಬ್ಬಳ್ಳಿ, ಮಡಿಕೇರಿ, ವಿರಾಜಪೇಟೆ,

ಗೋಣಿಕೊಪ್ಪಲು, ಸಿದ್ದಾಪುರ, ಮೈಸೂರು, ಮಂಡ್ಯ, ಕೋಲಾರ, ಕೆ.ಜಿ.ಎಫ್. ಗೌರಿಬಿದನೂರು, ತುಮಕೂರು ಮತ್ತು ಚಿಕ್ಕಬಳ್ಳಾಪುರಗಳಲ್ಲಿ ಹೊಂದಿದೆ.

ಆ) 289

ಇ) ಸರ್ಕಾರವು ನಿಗಮಕ್ಕೆ ಸಹಾಯ ಮಾಡಲು ಇಲ್ಲಿಯವರೆಗೆ 244.145 ಲಕ್ಷ ರೂ.ಗಳ ಷೇರು ಬಂಡವಾಳ ಮತ್ತು 60 ಲಕ್ಷ ರೂ.ಗಳ ಸಾಲನ್ನು ನೀಡಿದೆ.

ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ ಇದು ನಷ್ಟದಲ್ಲಿ ನಡೆಯುತ್ತಿದೆ. ರಾಜ್ಯದ ಬೇರೆ ಬೇರೆ ಖಾಸಗಿ ಸಂಸ್ಥೆಗಳು ಲಾಭದಾಯಕವಾಗಿ ನಡೆಯುತ್ತರತಕ್ಕಂತಹ ಸಂದರ್ಭದಲ್ಲಿ ಈ ಒಂದು ಸಂಸ್ಥೆ ನಷ್ಟದಲ್ಲಿ ನಡೆಯುವುದಕ್ಕೆ ಕಾರಣವೇನು ಮತ್ತು ಒಟ್ಟು ಇರುವ 289 ಸಿಬ್ಬಂದಿಗಳಲ್ಲಿ 200 ಸಿಬ್ಬಂದಿಗಳು ಹೆಚ್ಚುವರಿಯಾಗಿ ಇದೆ ಎನ್ನತಕ್ಕಂತಹದ್ದನ್ನು ವಿಷಯ ಸಮಿತಿ ಗಮನಿಸಿದೆ. ಈ ಬಗ್ಗೆ ತಮ್ಮ ನಿಲುವೇನು? 3.27 ಕೋಟಿ ರೂಪಾಯಿಗಳಷ್ಟು ನಷ್ಟವನ್ನು ತುಂಬಲು ಸರ್ಕಾರ ಕೈಗೊಳ್ಳತಕ್ಕಂತಹ ಕ್ರಮವೇನು ಮತ್ತು ಅದನ್ನು ಎಷ್ಟು ವರ್ಷದಲ್ಲಿ ಲಾಭದಾಯಕವನ್ನಾಗಿ ಮಾಡಬಹುದು? ಜೊತೆಗೆ ಈ ನಿಗಮದ ಮೂಲಕ ಈಗ ವಹಿವಾಟು ನಡೆಯುತ್ತಿಲ್ಲ, ಮೀನುಗಾರರು ಹಾಗೂ ಅಧಿಕಾರಿಗಳ ಮಧ್ಯೆ ಸಾಮರಸ್ಯವಿಲ್ಲವೆನ್ನುವ ಕೂಗಿದೆ, ಇದನ್ನು ಹೇಗೆ ಸರಿಪಡಿಸುತ್ತೀರಿ?

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ : ಅಧ್ಯಕ್ಷರೆ, ಮಾನ್ಯ ಸದಸ್ಯರು, ಈ ಸಂಸ್ಥೆಯಲ್ಲಿ ಹೆಚ್ಚುವರಿ ನೌಕರರಿದ್ದಾರೆಂದು ಹೇಳಿದರು, ಅದು ಸತ್ಯ. ಹಿಂದೆ ತಪ್ಪು ಮಾಡಿದ ಹಾಗೆ ನಾವು ಈಗ ಮಾಡದೆ, ಹೊಸ ನೌಕರರನ್ನು ತೆಗೆದುಕೊಳ್ಳುವುದಕ್ಕೆ ನಿಲ್ಲಿಸಿದ್ದೇವೆ. ಹಾಗೆಯೇ ಈ ಒಂದು ಸಂಸ್ಥೆ ಹಿಂದೆ ಬಹಳಷ್ಟು ನಷ್ಟದಲ್ಲಿತ್ತು. ಆದರೆ ಪ್ರಸ್ತುತ ಈ ವರ್ಷದ ಹಿಂದಿನ ಮೂರು ತಿಂಗಳಲ್ಲಿ ನಾವು 10 ಲಕ್ಷ ರೂಪಾಯಿಗಳ ಲಾಭವನ್ನು ಗಳಿಸಿದ್ದೇವೆ. ನಾವು ಇನ್ನೂ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈಗ ಹೆಚ್ಚುವರಿ ನೌಕರರನ್ನು ಸಾಧ್ಯವಾದ ಮಟ್ಟಿಗೆ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳಿಗೆ ತೆಗೆದುಕೊಳ್ಳುವುದು ಹಾಗೂ 1994-95 ಮತ್ತು 1995-96ನೇ ಸಾಲಿನಲ್ಲಿ ಪುನಃ ನಿಗಮಕ್ಕೆ ಹಣವನ್ನು ಸರ್ಕಾರದಿಂದ ಒದಗಿಸಿ ಇನ್ನೂ ಹೆಚ್ಚಿನ ವ್ಯಾಪರ ಮಾಡಲು ಪ್ರಯತ್ನ ಮಾಡುತ್ತೇವೆ. ಇದುವರೆವಿಗೆ ಮೀನುಗಾರರಿಗೆ ಮುಂಗಡ ಹಣವನ್ನು ಒದಗಿಸದೆ ಅವರು ಮೀನನ್ನು ಕೊಡುತ್ತಿರಲಿಲ್ಲ, ಕೆಲವು ಶೀತಲೀಕರಣ ಘಟಕಗಳು ನಷ್ಟದಲ್ಲಿ ನಡೆಯುತ್ತಿತ್ತು, ಅವನ್ನು ಪುನಶ್ಚೇತನಗೊಳಿಸಿ ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಂಡು ಅದನ್ನು ಲಾಭದಲ್ಲಿ ತರುವುದಕ್ಕೆ ಪ್ರಯತ್ನವನ್ನು ಮಾಡುತ್ತಾ ಇದ್ದೇವೆ.

ಡಾ|| ಯು. ಚಿತ್ತರಂಜನ್ : ಅನೇಕರಿಗೆ ಗೊತ್ತಿರುವುದಿಲ್ಲ, ಸಂಜೆ ಹೊತ್ತಿಗೆ ಮೀನನ್ನು ಹಿಡಿದುಕೊಂಡು ಬಂದದ್ದನ್ನು ಅವರು ಕೂಡಲೇ ವ್ಯಾಪಾರ ಮಾಡಿದಾಗ ಶೇಕಡ 6ರಷ್ಟನ್ನು ಅವರು ಇಟ್ಟುಕೊಳ್ಳುತ್ತಾರೆ. ಸಾಧಾರಣವಾಗಿ ಭಟ್ಕಳ್ ಬಂದರಿನಲ್ಲಿ ಒಂದು ದಿವಸಕ್ಕೆ ಒಂದು ಲಕ್ಷದಿಂದ ಇಪ್ಪತ್ತು ಲಕ್ಷದವರೆಗೆ ಮೀನು ಬರುತ್ತದೆ. ಅದರಲ್ಲಿ ಶೇಕಡ 6ರಷ್ಟನ್ನು ಇಟ್ಟುಕೊಂಡು ಮೀನುಗಾರರು ಯಾರಿದ್ದಾರೆ ಅವರಿಗೆ ಮುಂಗಡವನ್ನು ಕೊಡುತ್ತಾರೆ. ಇಷ್ಟು ಹಣವನ್ನು ಸಂಪಾದನೆ ಮಾಡುವುದಕ್ಕೆ ಅವಕಾಶವಿರುವಾಗ ಬಹುಶಃ ಇಲ್ಲಿ ಪ್ರೋತ್ಸಾಹ ಕಡಿಮೆ ಇದೆ. ಅವರಿಂದ ಎಂಟರ್‌ಪ್ರೆನ್ಯೂರ್ಸ್ ಅನ್ನು ತೆಗೆದುಕೊಳ್ಳುವಂತಹ ಕೊರತೆ ಇದೆ. ಯಾರು ಮೀನು ವಹಿವಾಟು ಮಾಡುತ್ತಾರೆ, ಅವರ ಮನಸ್ಸನ್ನು ಗೆದ್ದು, ಮಾಡಲು ಒಂದು ವಿಶೇಷವಾದ ಪ್ರೋತ್ಸಾಹ ಕೊಡುವುದಕ್ಕೆ ಏನು ಕಾರ್ಯಕ್ರಮ ರಚಿಸಲಾಗಿದೆ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಕಳೆದ 24 ವರ್ಷಗಳಿಂದ ಈ ಒಂದು ಸಂಸ್ಥೆ ನಷ್ಟದಲ್ಲಿಯೇ ಬಂದಿತ್ತು. ಕಾರಣ, ಅಲ್ಲಿರುವಂತಹ ವ್ಯವಸ್ಥೆ ಏನೆಂದರೆ ಮೀನುಗಾರರಿಗೆ, ಮೀನುಗಾರಿಕೆಯಲ್ಲಿ ಮುಂಗಡ ಹಣವನ್ನು ಆ ಸೀಸನ್‌ನಲ್ಲಿ ಅವರು ಕೊಟ್ಟರೆ ಮಾತ್ರ ಮೀನನ್ನು ಕೊಡುವಂತಹ ಒಂದು ವ್ಯವಸ್ಥೆ ಇದೆ. ಇದುವರೆಗೆ ಹಣದ ಕೊರತೆಯಿಂದ ಕೊಡುವುದಕ್ಕೆ ಕಷ್ಟವಾಗುತ್ತಿತ್ತು. ಈಗ ಸರ್ಕಾರದ ಮತಿಯಿಂದ ಪೆಚ್ಚಿನ ಹಣವನ್ನು ಒದಗಿಸಿಕೊಂಡು ಈ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ, ಮುಂದಿನ ದಿನಗಳಲ್ಲಿ ಇದನ್ನು ಪುನಃ ಲಾಭದಾಯಕವಾಗಿ ಮಾಡಲು ನಾವು ಹೆಚ್ಚಿನ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ : ಬ್ರಹ್ಮಾವರ ಹಂಗಾರ ಕಟ್ಟೆಯಲ್ಲಿ ನಿಗಮದ ಉತ್ಪಾದನೆಯಲ್ಲಿ ಘಟಕವನ್ನು ಮಾಡುವ ಯೋಜನೆ ಏನಾದರೂ ಇದೆಯೇ?

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ : ಇಷ್ಟರವರೆಗೆ ಆ ಒಂದು ಯೋಜನೆಯನ್ನು ಹಾಕಿಕೊಂಡಿಲ್ಲ, ಅಗತ್ಯ ಕಂಡುಬಂದಲ್ಲಿ ಅದನ್ನು ಹಾಕಿಕೊಳ್ಳುತ್ತೇವೆ.

ಬೀಳಗಿ ನ್ಯಾಯಾಲಯಕ್ಕೆ ಸ್ವಂತ ಕಟ್ಟಡವಿಲ್ಲದಿರುವುದು

2295 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆ ಬೀಳಗಿ ತಾಲ್ಲೂಕು ಕೇಂದ್ರ ಸ್ಥಳವಿದ್ದು ಅಲ್ಲಿ ನ್ಯಾಯಾಲಯದ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದೇ ವರ್ಷದಲ್ಲಿ ಕಟ್ಟಡ ಕಟ್ಟಲು ಕಾರ್ಯಕ್ರಮ ಹಾಕಿಕೊಳ್ಳಲಾಗುವುದೆ?

ಇ) ಕಾರ್ಯಕ್ರಮ ಹಾಕಿಕೊಂಡಿದ್ದಲ್ಲಿ ಕಟ್ಟಡದ ಅಂದಾಜು ವೆಚ್ಚವೆಷ್ಟು?

ಈ) ಹಾಗಿಲ್ಲದಿದ್ದಲ್ಲಿ 1995-96ನೇ ಸಾಲಿನಲ್ಲಿ ಕಟ್ಟಡ ಸಲುವಾಗಿ ಏನಾದರೂ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ.ಪಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಈ ಉದ್ದೇಶಕ್ಕಾಗಿ ಸೂಕ್ತ ನಿವೇಶನ ಹುಡುಕುವ ನಿಟ್ಟಿನಲ್ಲಿ ವ್ಯವಸ್ಥಾಪಕ ನಿರ್ದೇಶಕರು, ರಿಸೆಟ್ಲಮೆಂಟ್ ಮತ್ತು ಪುನರ್ವಸತಿ, ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟೆ ಇವರನ್ನು ಬೀಳಗಿಯಲ್ಲಿ 4 ಎಕರೆ ಜಮೀನು ಒದಗಿಸುವಂತೆ ಕೋರಿದೆ ಹಾಗೂ ಜಿಲ್ಲಾ ನ್ಯಾಯಾಧೀಶರು ಬಿಜಾಪುರರವರನ್ನು ಸದರಿ ಜಮೀನು ನ್ಯಾಯಾಲಯ ಕಟ್ಟಡ ಕಟ್ಟಲು ಸೂಕ್ತವೇ ಎಂಬ ಬಗ್ಗೆ ಅಭಿಪ್ರಾಯ ನೀಡಲು ಕೋರಿದೆ. ಈ ಬಗ್ಗೆ ಜಮೀನು ಲಭ್ಯವಾದ ಕೂಡಲೇ ಉಚ್ಚನ್ಯಾಯಾಲಯ ಪ್ರಸ್ತಾವನೆ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜೆ.ಟಿ. ಪಾಟೀಲ್ : ಅಧ್ಯಕ್ಷರೇ, ಮಂತ್ರಿಗಳು ತಮ್ಮ ಉತ್ತರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ರಿಸೆಟ್ಲಮೆಂಟ್ ಮತ್ತು ಪುನರ್ವಸತಿ, ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟೆ ಇವರಿಂದ ನಿವೇಶನವನ್ನು ಪಡೆಮಕೊಳ್ಳಲು ಕೋರಲಾಗಿದೆ ಎಂದು ಹೇಳಿದ್ದಾರೆ. ಅದನ್ನು ತಾವು ಯಾವಾಗ ಕೋರಿದ್ದೀರಿ? ಅವರಿಂದ ಯಾವಾಗ